MYSORE LEGISLATIVE ASSEMBLY

TWENTY-FIFTH DAY.

Friday, 30th March 1956.

The House met in the Assembly Hall, Atara Kacheri, Bangalore, at Thirty Minutes past Eight of the Clock.

MR. SPEAKER [SRI H. S. RUDRAPPA, B.SC., LL.B.] in the Chair.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವಿದ್ಯುಚ್ಛಕ್ತಿ ಇಲ್ಲದೆ ಬಹಳ ಕತ್ತಲಾಗಿದೆ ಮತ್ತು ನದನ್ಯರು ಮಾತನಾಡುವ ವಿಷಯಗಳು ಕೇಳಿಸುವುದಿಲ್ಲವಾದ್ದರಿಂದ ಸಭೆಯನ್ನು ಸ್ವಲ್ಪ ಹೊತ್ತಿನ ನಂತರ ಪ್ರಾರಂಭಿಸ ಬಹುದು.

ಅಧ್ಯಕ್ಷರು.—ವಿದ್ಯುಚ್ಛಕ್ತಿ ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಅದು ನಮ್ಮ ನಿಯಂತ್ರಣದಲ್ಲಿಲ್ಲ. ಆದ್ದರಿಂದ ನಾವು ಇರುವುದರಲ್ಲಿಯೇ ಸರಿಹೊಂದಿಸಿಕೊಂಡು ಹೋಗ ಬೇಕು.

QUESTIONS AND ANSWERS

Water Supply from Channahalli Anicut to Villages in Nagamangala Taluk.

Q.—219. **Sri K. SINGARI GOWDA** (Nagamangala).—

Will the Government be pleased to state :—

(*a*) whether the villagers of Chettanahalli, Kedagabalu and Naganahalli in Nagamangala Taluk are urging for the supply of water for irrigation from Channahalli Anecut, Marconahalli Division, by opening a right bank channel ;

(*b*) the action taken on the representation ?

A.—**Sri H. M. CHANNABASAPPA** (Minister for Industries).—

(*a*) Yes.

(*b*) It is proposed to extend the channel to the extent possible from Doddaupla ane across the Shimsha river. An estimate for the same is being got up.

ಶ್ರೀ ಕೆ. ಸಿಂಗಾರಿಗೌಡ.—ಹಿಂದೆ, ಬಲಗಡೆ ನಾಲೆಯಿಂದ ಈ ಪ್ರದೇಶಗಳಿಗೆ ನೀರನ್ನೊದಗಿಸಬೇಕೆಂದು ಉದ್ದೇಶಪಟ್ಟಿರಲಿಲ್ಲವೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ಮುಂದಿರ ತಕ್ಕ ಅಂಕಿ ಅಂಶಗಳಿಂದ ಆ ವಿಚಾರ ಹೊರಪಟ್ಟಿಲ್ಲ.

ಶ್ರೀ ಕೆ. ಸಿಂಗಾರಿಗೌಡ.—ಈಗ ಅಲ್ಲಿ ನೀರು ಹೆಚ್ಚಾಗಿ ತುಂಬಿ ಹರಿದುಹೋಗುತ್ತಿದೆ. ಈ ನೀರನ್ನು 300 ಎಕರೆಗಳಿಗೆ ಕೊಡುವುದಕ್ಕೆ ಸಾಧ್ಯವೆಂದು ಅಸಿಸ್ಟೆಂಟ್ ಇಂಜಿನಿಯರು ವರದಿ ಮಾಡಿರುವುದು ಸರ್ಕಾರದ ಮುಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಿದೆ. ಚನ್ನಹಳ್ಳಿ ಅಣೆಯಿಂದ ನಾಲಾ ತೆಗೆದು ಚಟ್ನಹಳ್ಳಿ ಅಚ್ಚುಕಟ್ಟಿಗೆ ನೀರು ಕೊಡುವುದಕ್ಕೆ ಆ ಪ್ರದೇಶದ ಅನೇಕ ರೈತರು ತಕರಾರು ಮಾಡಿದ್ದಾರೆ.

ಶ್ರೀ ಕೆ. ಸಿಂಗಾರಿಗೌಡ.—ತಕರಾರು ಮಾಡುತ್ತಿರುವ ರೈತರ ಪ್ರದೇಶದಲ್ಲಿ ಪೂರ್ತಿಯಾಗಿ ನೀರನ್ನು ಕೊಡಲಾಗಿದೆಯಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನೀರಾವರಿ ಪ್ರದೇಶವಾಗಿದೆ. ಅಲ್ಲಿಂದ ನಾಲಾ ತೆಗೆದು ನೀರು ಕೊಟ್ಟ ಪಕ್ಷದಲ್ಲಿ ಆ ಪ್ರದೇಶದಲ್ಲಿ ನೀರಿಲ್ಲದೆ ತೊಂದರೆಯಾಗುತ್ತದೆ ಎಂಬುದಾಗಿ ತಕರಾರು ಮಾಡಿದ್ದಾರೆ.

ಶ್ರೀ ಕೆ. ಸಿಂಗಾರಿಗೌಡ.—ಈಗ ಆ ರೀತಿಯಾಗಿ ಯಾವ ತೊಂದರೆಯೂ ಆಗುವುದಿಲ್ಲವಾದ್ದರಿಂದ ನೀರು ಕೊಡಬಹುದೆಂದು ಸಬ್ ಡಿವಿಜ್ ಅಧಿಕಾರಿಗಳು ಸರ್ಕಾರಕ್ಕೆ ರಿಪೋರ್ಟ್ ಕಳುಹಿಸಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ. ಆರೀತಿ ಕಳುಹಿಸಿಲ್ಲ. ಅರಕೆರೆವರೆಗೆ 4½ ಮೈಲಿ ನಾಲಾ ಇದೆ. ಆದನ್ನು ಒಂದು ಮೈಲಿ ಬಡಾವಣೆ ಮಾಡಿ ನೀರು ಕೊಡಬೇಕೆಂದು ಮಾಡಿದ್ದೇವೆ. ಅದನ್ನು ಪುನಃ ಚಟ್ನಹಳ್ಳಿಯ ವರೆಗೆ ಮುಂದುವರಿಸಿ ನೀರು ಕೊಡುವುದಕ್ಕೆ ಸಾಧ್ಯವೇ ಎಂಬ ವಿಷಯವನ್ನು ಪರಿಶೀಲನೆ ಮಾಡ ಬೇಕು.

ಶ್ರೀ ಕೆ. ಸಿಂಗಾರಿಗೌಡ.—ತಾವು ಸ್ಥಳಕ್ಕೆ ಭೇಟಿ ಕೊಟ್ಟು ಅಜಮಾಯಿಷಿ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಚನ್ನಹಳ್ಳಿ ಅಣೆಯನ್ನೂ ನೋಡಿಕೊಂಡು ಬಂದಿದ್ದೇನೆ.

ಶ್ರೀ ಕೆ. ಸಿಂಗಾರಿಗೌಡ.—ತಕ್ಷಣ ವರದಿ ಕಳುಹಿಸ ಬೇಕೆಂದು ಅಲ್ಲಿಯ ಸಬ್ ಡಿವಿಜ್ ಅಧಿಕಾರಿಗಳಿಗೆ ತಿಳುವಳಿಕೆ ಕೊಟ್ಟಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ದಿವಸ ಈ ಪ್ರಶ್ನೆ ನನ್ನ ಮುಂದಿರಲಿಲ್ಲ. ಚನ್ನಹಳ್ಳಿ ಅಣೆಯಿಂದ ನೀರು ಕೊಡಲು ಸಾಧ್ಯವೇ ಎಂಬ ವಿಷಯವನ್ನು ನಹಾನು ಥೂತಿಯಿಂದ ಪರಿಶೀಲನೆ ಮಾಡುತ್ತೇವೆ.

* Indicates that the remarks or speeches have not been revised by the Member concerned.

ಶ್ರೀ ಕೆ. ಸಿಂಗಾರಿಗೌಡ.—ಸ್ಥಳೀಯ ಅಧಿಕಾರಿಗಳು ಪಾರ್ಟಿ ವೈಷಮ್ಯಗಳ ಮೇರೆಗೆ, ಪಕ್ಷಪಾತ ನೀತಿಯನ್ನನು ನರಿನುತ್ತಿದ್ದಾರೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಾರ್ಟಿ ವೈಷಮ್ಯಗಳ ಮೇರೆ ನಡೆಯುತ್ತಿದ್ದರೆ ಅದನ್ನು ಪರಿಶೀಲನೆ ಮಾಡಿ ಅಂಥವರನ್ನು ಶಿಕ್ಷೆ ಮಾಡಲಾಗುತ್ತದೆ.

ಶ್ರೀ ಕೆ. ಸಿಂಗಾರಿಗೌಡ.—ಹಿಂದೆ ಸಬ್ ಡಿವಿಜ್ ಅಧಿಕಾರಿಗಳು ವರಪಿಯನ್ನು ಕಳುಹಿಸಿದ್ದ ತಾರೀಖು ಮುಂತಾದ ವಿವರಗಳನ್ನು ಕೊಟ್ಟರೆ ಅದನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ಆಫೀಸಿನಲ್ಲಿರಬಹುದು. ಫೈಲ್ ತರಿಸಿಕೊಂಡು ಅದನ್ನು ಪರಿಶೀಲನೆ ಮಾಡ ತೆ ನೆ.

ಶ್ರೀ ಎಚ್. ಹುಚ್ಚಮಾಸಿ ಗೌಡ.—ಎಡಗಡೆಯನಾಲಾ ರೈತರು ಅಡ್ಡಿ ಮಾಡಿದ್ದಾರೆಂದು ಈಗತಾನೇ ಮಂತ್ರಿಗಳು ಅಪ್ಪಣೆ ಕೊಡಿ ದರು. ಆದರೆ ಇದರಲ್ಲಿ ನೀರಿನ ತೊಂದರೆಯಾಗುತ್ತದೆನ್ನುವುದಲ್ಲ. ಕಂಚೊ ರ್ಡ್ ಮಡುಬಾಯಿಗಳಿಲ್ಲದೆ ಇರುವುದರಿಂದ, ಅಂದರೆ 10 ಎಕರೆ ಅಚ್ಚುಕಟ್ಟಿಗೆ 50-100 ಎಕರೆ ಅಚ್ಚುಕಟ್ಟಿಗೆ ಬೇಕಾಗುವಷ್ಟು ದೊಡ್ಡ ದೊಡ್ಡ ಮಡುಬಾಯಿಗಳನ್ನಿಟ್ಟಿರುವುದರಿಂದ, ನಾಲೆಗಳಲ್ಲಿ ಹೂಳು (silt) ತೆಗೆನದೆ ಇರುವುದರಿಂದ ಈ ರೀತಿಯಾಗಿದೆ ಎಂದು ಮೊನ್ನೆತಾನೆ ಮಾನ್ಯ ಮಂತ್ರಿಗಳು ಅಲ್ಲಿಗೆ ದಯ ಮಾಡಿಸಿದ್ದಾಗ ಜನಗಳು ಮನವಿಮಾಡಿಕೊಂಡಿದ್ದಾರಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿಯಾಗಿ ಜನಗಳು ಅರ್ಜಿ ಕೊಟ್ಟರು. ನಾನೂ ಕೂಡ ಹೋಗಿ ನೋಡಿದೆ. ನಾಲೆಗಳಲ್ಲಿ ಹೂಳು (silt) ಕ್ರಮವಾಗಿ ತೆಗೆದಿರಲಿಲ್ಲ. ಮತ್ತೆ ದೊಡ್ಡ ದೊಡ್ಡ ಮಡುಬಾಯಿಗಳನ್ನಿಡಲಾಗಿದೆ. ತನ್ಮೂಲಕ ಹೆಚ್ಚು ನೀರು ಪೋಲಾಗುತ್ತದೆಂದು ನನ್ನ ಗಮನಕ್ಕೆ ಬಂತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೀರು ಹುಳಿಗಾಲದಲ್ಲಿ ಸಾಕಾದಷ್ಟು ಒದಗುತ್ತದೆಂಬುದು ಇಂಜಿನಿಯರ್ ಅವರ ರಿಪೋರ್ಟ್ ಮುಖಾಂತರ ಸರ್ಕಾರಕ್ಕೆ ಗೊತ್ತಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಿಲ್ಟ್ ತೆಗೆಸಿ ನಾಲೆಗಳನ್ನು ದುರಸ್ತುಮಾಡಿಸಿ, ಮಡುಬಾಯಿಗಳನ್ನು ಕೂಡ ಕಡಿಮೆ ಮಾಡಿದರೆ ಆಗ ನೀರು ಹೆಚ್ಚಾಗಿ ಬರುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ದೊಡ್ಡ ಉಪ್ಪಳ ಅಣೆಗಿಂತ ಚನ್ನಹಳ್ಳಿ ಅಣೆಯಲ್ಲಿ ಬಹಳ ಹೆಚ್ಚಾಗಿ seepage water ಬರುತ್ತದೆಂದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚಟ್ಟನಹಳ್ಳಿ ಅಣೆಗಿಂತ ಮೇಲ್ಭಾಗದಲ್ಲಿರುವ ದೊಡ್ಡ ಉಪ್ಪಳದಿಂದ ಬಹುಶಃ ನಾಲೆಯನ್ನು ತೆಗೆದುಕೊಂಡರೆ ಅನುಕೂಲವಾಗುತ್ತದೆ ಮತ್ತು ಇನ್ನೂ ಹೆಚ್ಚಾಗಿ ಬಡಾವಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನನ್ನ ಪ್ರಶ್ನೆ ಅದಲ್ಲ. ಇವೆರಡರಲ್ಲಿಯೂ ಕೂಡ ದೊಡ್ಡ ಉಪ್ಪಳ ಅಣೆ ಮೇಲ್ಭಾಗದಲ್ಲಿದೆ. ಚನ್ನಹಳ್ಳಿ ಅಣೆ ಕೆಳಭಾಗದಲ್ಲಿದೆ. ವ್ಯವಸಾಯ ಮಳೆಗಾಲದಲ್ಲಿ ನಡೆಯುತ್ತದೆ. ಕೆಳಭಾಗದಲ್ಲಿರತಕ್ಕ ಚನ್ನಹಳ್ಳಿ ಅಣೆಯಿಂದ ಹೆಚ್ಚಿಗೆ ಬರುವ seepage water ಒದಗಿಸಿದರೆ ಏನೂ ತೊಂದರೆಯಾಗುವುದಿಲ್ಲವಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ದೊಡ್ಡ ಉಪ್ಪಳ ಮೇಲ್ಭಾಗದಲ್ಲಿರುವಾಗ ಅಲ್ಲಿಂದ ಎಷ್ಟು ನೀರು ಬಿಡಲಾಗುತ್ತದೆಯೋ ಅಷ್ಟು ನೀರು ಮಾತ್ರ ಚಟ್ಟನಹಳ್ಳಿ ಅಣೆಗೆ ಬರಬೇಕು. ಹೀಗಿರುವಾಗ seepage water ಎಲ್ಲಿಂದ ಬರುತ್ತದೆ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಂಜಿನಿಯರುಗಳಾಗಿದ್ದರೆ ಈ ವಿಷಯ ಬಹಳ ಸುಲಭದಲ್ಲಿ ಅರ್ಥವಾಗುತ್ತಿತ್ತು. ಮಂತ್ರಿಗಳು non-technical man ಆಗಿರುವುದರಿಂದ ಸ್ವಲ್ಪ ಕಷ್ಟ. ಎರಡು ಅಣೆಗಳಿಗೂ ಮಾರ್ಕೋನಹಳ್ಳಿ ಅಚ್ಚುಕಟ್ಟಿನ ಸೀಪೇಜ್ ಬರುತ್ತದೆ. ಮೇಲ್ಭಾಗದ ಅಣೆಗೆ ಕಡಿಮೆ ಅಚ್ಚುಕಟ್ಟಿರುವುದರಿಂದ ಕಡಿಮೆ ಸೀಪೇಜ್ ಬರುತ್ತದೆ. ಎಂಡನೆಯದಕ್ಕೆ ಮಧ್ಯೆ ಇರತಕ್ಕ ಅಚ್ಚುಕಟ್ಟಿನ ಸೀಪೇಜ್ ಮತ್ತು ದೊಡ್ಡ ಉಪ್ಪಳದಿಂದ 400 ಎಕರೆಗೆ ಬರತಕ್ಕ ನೀರು ಎಲ್ಲ ಸೇರಿ ಚಟ್ಟಹಳ್ಳಿ ಅಣೆಗೆ ಹೆಚ್ಚಿಗೆ collect ಆಗುತ್ತದೆ. ಅಲ್ಲಿಂದ ಕಾಲುವೆ ತೆಗೆಯುವುದು ಸೂಕ್ತವಲ್ಲವೇ. ಎಂದು ಕೇಳುತ್ತಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ದೊಡ್ಡ ಉಪ್ಪಳದಿಂದ ಎಷ್ಟು ಅಚ್ಚುಕಟ್ಟಿನ ಸೀಪೇಜ್ ಬರುತ್ತದೆ ಮತ್ತು ಚಟ್ಟಹಳ್ಳಿ ಅಣೆಯಿಂದ ಎಷ್ಟು ಸೀಪೇಜ್ ಬರುತ್ತದೆ ಎಂದು ಪರಿಶೀಲನೆ ಮಾಡಿ ಹೇಳಬೇಕು.

Anecut near Bagur Village, across Gundlu River.

Q.—404. Sri M. LINGANNA (Nanjangud).—

Will the Government be pleased to state :—

(*a*) whether an estimate was prepared for a small anceut near Bagur Village, Kowlande Hobli, Nanjangud Taluk, across Gundlu river ;

(*b*) how many years back the estimate was prepared and what is the total cost ;

(*c*) whether the villagers of Bagur and Koodlapura agreed to dig the canal if the project is undertaken ;

(*d*) why the work is not yet taken up ?

A.—Sri H. M. CHANNABASAPPA (Minister for Industries).—

(*a*) No.

(*b*), (*c*) and (*d*) Do not arise.

Sri M. LINGANNA.—Is it not a fact that to a question regarding the same subject put a year before last, a negative answer was given ?

*Sri H. M. CHANNABASAPPA.—I am not aware.

Sri M. LINGANNA.—Will you enquire into the matter ?

Sri H. M. CHANNABASAPPA.—Certainly.